**ಸಾಕ್ಷಿಯನ್ನು ದಿಃ16.02.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಾವು ಜಮೀನಿನಲ್ಲಿ ಕೆಲಸ ಮಾಡುವಾಗ ಪ್ರತಿವಾದಿಗಳು ಗಲಾಟೆ ಮಾಡಿದ್ದರಿಂದ ಈ ದಾವೆ ಹಾಕಿರುತ್ತೇವೆ. ಅವರು ದಿಃ 18.02.2024 ರಂದು ತೊಂದರೆ ನೀಡಿದ್ದರು. ಫೆಬ್ರುವರಿ ಬೇಸಿಗೆ ಕಾಲ ಜಮೀನಿನಲ್ಲಿ ಏನೂ ಇರುವುದಿಲ್ಲ ಎಂದರೆ, ಉಳುಮೆ ಮಾಡಿಸಲು ಹೋಗಿದ್ದೆವು.

2. ನಮ್ಮ ಜಮೀನಿಗೆ ಮೊದಲು ಲಕ್ಷ್ಮಣೇಗೌಡರು, ಜಯರಾಮೇಗೌಡರು ಹಾಗೂ ರಾಮಕೃಷ್ಣ ಬಂದಿದ್ದರು. ಸದರಿ ವಿಚಾರವನ್ನು ನಮ್ಮ ವಕೀಲರಿಗೆ ತಿಳಿಸಿದ್ದೇವೆ.

3. ನೀವು ಕೆ.ಆರ್.ನಗರದಲ್ಲಿ ಖಾಯಂ ವಾಸವಿದ್ದೀರಾ ಎಂದರೆ, ಸರಿ, ಆದರೆ ಅಲ್ಲಿಂದ ಹೋಗಿ ಬಂದು ಜಮೀನು ಮಾಡುತ್ತೇವೆ.

4. 2024 ರಲ್ಲಿ ದಾವಾ ಸ್ವತ್ತಿನಲ್ಲಿ ರಾಗಿ ಮತ್ತು ತಂಬಾಕು ಬೆಳೆದಿದ್ದೆವು. ಪ್ರತಿವಾದಿಗಳು ನಿಮ್ಮ ಜಮೀನಿಗೆ ಬಂದಿದ್ದನ್ನು ನೋಡಿದವರು ಇದ್ದಾರಾ ಎಂದರೆ, ಸಣ್ಣತಮ್ಮೇಗೌಡರು ನೋಡಿದ್ದಾರೆ.

5. ನೀವು ಕೆ.ಆರ್ ನಗರದಲ್ಲಿ ಇರುವುದರಿಂದ ಖುದ್ದಾಗಿ ಬಂದು ವ್ಯವಸಾಯ ಮಾಡುವುದಿಲ್ಲ ಎಂದರೆ, ಇಲ್ಲ ನಾವೇ ಮಾಡುತ್ತೇವೆ ಎಂದು ನುಡಿಯುತ್ತಾರೆ.

6. ಈ ದಾವೆಯನ್ನು ಸ.ನಂ.63/1 ರಲ್ಲಿ 2 ಎಕರೆ 32 ಗುಂಟೆಗೆ ಹಾಕಿರುತ್ತೇವೆ. ಉತ್ತರಕ್ಕೆಃ ರಸ್ತೆ, ಪೂರ್ವಕ್ಕೆಃ ಅಣ್ಣೇಗೌಡರ ಒಟ್ಟು ಕುಟುಂಬದ ಜಮೀನು, ಪಶ್ಚಿಮಕ್ಕೆಃ ಜವರೇಗೌಡರ ಜಮೀನು ಹಾಗೂ ದಕ್ಷಿಣಕ್ಕೆಃ ಹೊನ್ನೇಗೌಡರ ಜಮೀನು.

7. ದಾವಾ ಜಮೀನು ನನಗೆ ವಿಭಾಗ ಮಾಡಿ ನನ್ನ ತಂದೆ ಕೊಟ್ಟಿರುತ್ತಾರೆ. ನನ್ನ ತಂದೆ ವಿ.ಎ.ಅಪ್ಪಾಜಿಗೌಡರಿಗೆ ಅವರ ತಂದೆ ಕುಂಡಪ್ಪನ ಅಪ್ಪಾಜಿಯಿಂದ ಬಂದಿರುತ್ತದೆ. ಕುಂಡಪ್ಪನ ಅಪ್ಪಾಜಿ ಜಮೀನು ಖರೀದಿ ಮಾಡಿದ್ದರಾ ಎಂದರೆ, ಇಲ್ಲ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ.

8. ವಿಭಾಗವು ದಿಃ 12.12.2023 ರಂದು ನನ್ನ ತಂದೆ, ನನ್ನ ಸಹೋದರರು ಹಾಗೂ ನನ್ನ ನಡುವೆ ಆಗಿದೆ. ವಿಭಾಗ ಪತ್ರಕ್ಕೆ ನಾನು ಪಕ್ಷಗಾರಳಾಗಿಲ್ಲ. ನಮ್ಮ ಹೆಸರಿಗೆ ಆದಾಗ ನಾನು ಉಪ ನೊಂದಣಿ ಕಛೇರಿಗೆ ಹೋಗಿದ್ದೆ. ನನಗೆ ನನ್ನ ಸಹೋದರು ಹಾಗೂ ತಂದೆ ಜಮೀನು ವಿಭಾಗ ಮಾಡಿ ನೊಂದಣಿ ಮಾಡಿ ಕೊಟ್ಟಿದ್ದಾರೆ.

9. ನನ್ನ ತಂದೆಗೆ ಒಟ್ಟು ಗದ್ದೆ ಸೇರಿ 13-14 ಎಕರೆ ಜಮೀನು ಇತ್ತು.

10. ವಿಭಾಗ ಪತ್ರದಲ್ಲಿ 14 ಎಕರೆ ಸೇರಿ ಆಗಿದೆಯಾ ಎಂದರೆ, ಇಲ್ಲ.

11. ವಿಭಾಗ ಪತ್ರದಲ್ಲಿ ನಿಮ್ಮ ತಂದೆಗೆ ಹಾಗೂ ನಿಮ್ಮ ಅಣ್ಣತಮ್ಮಂದಿರಿಗೆ ಎಷ್ಟು ಎಕರೆ ಬಂದಿತ್ತು ಎಂದರೆ, ನನಗೆ ಬಂದ ಜಮೀನು ಬಿಟ್ಟು ಅವರಿಗೆ ಭಾಗ ಮಾಡಿದ್ದಾರೆ, ಎಷ್ಟು ಎಂದು ಬರೆದಿದ್ದಾರಾ ಎಂದರೆ, ಇಲ್ಲ. ವಿಭಾಗ ಪತ್ರವನ್ನು ನನಗೆ ಒಬ್ಬಳಿಗೆ ಇಷ್ಟು ಎಂದು ಕೊಟ್ಟಿದ್ದಾರೆ.

12. ವಿಭಾಗ ಪತ್ರದಲ್ಲಿ ನಿಮ್ಮ ತಂದೆ ಹಾಗೂ ಸಹೋದರರು ನಿಮಗೆ ಮಾತ್ರ ವಿಭಾಗ ಮಾಡಿದ್ದೇವೆ ಎಂದು ಬರೆದಿದ್ದಾರಾ ಎಂದರೆ ಇಲ್ಲ.

13. ಈ ವಿಭಾಗಪತ್ರದಡಿಯಲ್ಲಿ ನಿಮ್ಮ ತಂದೆ ಹಾಗೂ ಸಹೋದರರು ಏನಾದರೂ ಪಡೆದಿದ್ದಾರಾ ಎಂದರೆ, ಇಲ್ಲ, ರಿಜಿಸ್ಟ್ರೇಷನ್‌ಗಾಗಿ ನಾನು 50 ಸಾವಿರ ನನ್ನ ತಂದೆಗೆ ಕೊಟ್ಟಿದ್ದೇನೆ. ಅವರಿಗೆ ಏನಕ್ಕಾದರೂ ಬೇಕಾಗುತ್ತದೆ ಎಂದು ಕೊಟ್ಟಿದ್ದೆ. ಅವರು 50 ಸಾವಿರ ಪಡೆದು ಉಳಿಕೆ ಆಸ್ತಿಗಳನ್ನು ನಿಮಗೆ ಬಿಟ್ಟುಕೊಟ್ಟಿದ್ದೇವೆ ಎಂದು ಬರೆದುಕೊಟ್ಟಿದ್ದಾರಾ ಎಂದರೆ, ಇಲ್ಲ.

14. ನಿಮ್ಮ ಅಜ್ಜನಿಗೆ ಪಿತ್ರಾರ್ಜಿತ ಸ್ವತ್ತು ಎಂಬ ಬಗ್ಗೆ ದಾಖಲೆ ನೀಡಿದ್ದೀರಾ ಎಂದರೆ, ಪಹಣಿ ಕೊಟ್ಟಿದ್ದೇವೆ. ಬೇರೆ ದಾಖಲೆ ನೀಡಿದ್ದೀರಾ ಎಂದರೆ ಕೊಟ್ಟಿದ್ದೇವೆ. ಪಹಣಿ ಬಿಟ್ಟು ಬೇರೆ ಏನೂ ಕೊಟ್ಟಿಲ್ಲ ಎಂದರೆ ಸರಿ. ಎಷ್ಟು ವರ್ಷದ ಪಹಣಿ ನೀಡಿದ್ದೀರಾ ಎಂದರೆ, ನೆನಪಿಲ್ಲ. ನೀವು 2023-24ರ ಪಹಣಿ ಮಾತ್ರ ನೀಡಿದ್ದೀರಾ ಎಂದರೆ ಸರಿ. ನಮ್ಮ ತಾತನ ಹೆಸರಿನಲ್ಲಿರುವ ಪಹಣಿ ಕೊಟ್ಟಿಲ್ಲ. ನನ್ನ ಹೆಸರಿನಲ್ಲಿ 2023 ರಿಂದ ಪಹಣಿ ಇದೆ.

15. ನನ್ನ ತಂದೆಗೆ ನಾನು ಒಬ್ಬಳೇ ಹೆಣ್ಣು ಮಗಳು ಹಾಗೂ 3 ಜನ ಗಂಡು ಮಕ್ಕಳು.

16. ಹೊನ್ನೇಗೌಡ ನನ್ನ ತಂದೆಯ ಅಣ್ಣ. ಹೊನ್ನೇಗೌಡ, ಮಹಾದೇವ, ಜಯಮ್ಮ, ಕಾಳಮರಿಗೌಡ, ಕೃಷ್ಣೇಗೌಡ, ಅಪ್ಪಾಜಿಗೌಡ, ಸಹದೇವ ಹಾಗೂ ಪವಿತ್ರ ರವರು ವಿಭಾಗ ಪತ್ರಕ್ಕೆ ಸಹಿ ಹಾಕಿದ್ದಾರಾ ಎಂದರೆ ಇಲ್ಲ.

17. ದಾವಾ ಸ್ವತ್ತು ಸೇರಿ 14 ಎಕರೆ ಜಮೀನಿನಲ್ಲಿ ನಿಮ್ಮ ದೊಡ್ಡಪ್ಪಂದಿರಿಗೆ ಹಕ್ಕು ಇದೆಯಾ ಎಂದರೆ ಇಲ್ಲ. ನನ್ನ ತಂದೆ ಹೆಸರಿಗೆ ಆದ ನಂತರ ನನಗೆ ಕೊಟ್ಟಿದ್ದಾರೆ.

18. ನಿಮ್ಮ ತಾತ ನಿಮ್ಮ ತಂದೆಗೆ ಯಾವುದಾದರೂ ಪತ್ರ ಕೊಟ್ಟಿದ್ದಾರಾ ಎಂದರೆ, ರಿಜಿಸ್ಟರ್ ಪತ್ರ ಇದೆ. ಅದನ್ನು ನ್ಯಾಯಾಲಯಕ್ಕೆ ನೀಡಿಲ್ಲ. ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ, ಇಲ್ಲ.

19. ನಾನು 7 ನೇ ತರಗತಿವರೆಗೆ ಓದಿದ್ದೇನೆ. ನಿಪಿ - 1 ರಲ್ಲಿ ಬಿ ಶೆಡ್ಯೂಲ್ ಮೇಲೆ ಸ.ನಂ.63/1 ರಲ್ಲಿ 2 ಎಕರೆ 37 ಗುಂಟೆ ಎಂದು ಪೆನ್ನಿನಲ್ಲಿ ಬರೆದಿದ್ದಾರಾ ಎಂದರೆ, ಹೌದು ಅದನ್ನು ವೆಂಡರ್ ಬರೆದಿದ್ದಾರೆ ಎಂದು ನುಡಿಯುತ್ತಾರೆ. ಅದನ್ನು ನಿಮ್ಮ ಎದುರಿಗೆ ಬರೆದರಾ ಎಂದರೆ, ಹೌದರು. ಅದನ್ನು ತಿದ್ದಿದ ಕಡೆ ನಿಮ್ಮ ಅಥವಾ ನಿಮ್ಮ ತಂದೆಯ ಸಹಿ ಇಲ್ಲ ಎಂದರೆ ಸರಿ.

20. ನಿಪಿ - 1 ರಲ್ಲಿ ದಕ್ಷಿಣಕ್ಕೆ ಹೊನ್ನೇಗೌಡರ ಜಮೀನು, ಪೂರ್ವಕ್ಕೆಃ ಹೊನ್ನೇಗೌಡರ ಜಮೀನು, ಪಶ್ಚಿಮಕ್ಕೆಃ ಜವರೇಗೌಡರ ಜಮೀನು ಹಾಗೂ ಉತ್ತರಕ್ಕೆ ರಸ್ತೆ ಎಂದು ಬರೆದಿದ್ದಾರೆ. ಸದರಿ ಚಕ್ಕುಬಂದಿಯನ್ನು ಯಾರು ಹೇಳಿ ಬರೆಸಿದ್ದಾರೆ, ನನ್ನ ತಂದೆ ಹೇಳಿದ್ದಾರೆ.

21. ನಿಪಿ - 1 ರಲ್ಲಿ ಯಾವ ಶೆಡ್ಯೂಲ್ ನಲ್ಲಿ ನಿಮಗೆ ಆಸ್ತಿ ಬಂದಿದೆ ಎಂದರೆ, ಎ ಶೆಡ್ಯೂಲ್ ನಲ್ಲಿ ಬಂದಿದೆ. ನಿಪಿ - 1 ರಲ್ಲಿ ವಿ.ಎ ಅಪ್ಪಾಜಿಗೌಡ ಹಾಗೂ ವಿ.ಎ ರವಿ, ಮಂಜುನಾಥ, ಹರೀಶ ರವರು 50 ಸಾವಿರ ಗಳನ್ನು ಪಡೆದುಕೊಂಡು ತಮ್ಮ ಭಾಗದ ಹಕ್ಕನ್ನು ಬಿ ಶೆಡ್ಯೂಲ್ ದಾರರಿಗೆ ಬಿಟ್ಟುಕೊಡುತ್ತೇವೆ ಎಂದು ಬರೆದಿದ್ದಾರಾ ಎಂದರೆ, ಇಲ್ಲ.

22. ನಿಪಿ - 1 ರನ್ನು ಈ ದಾವೆಗಾಗಿ ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.

23. ಸ.ನಂ.63/1 ರಲ್ಲಿ 2 ಎಕರೆ 37 ಗುಂಟೆ ಇದೆ.

24. ನಿಮಗೆ ಪ್ರತಿವಾದಿಗಳು ಗೊತ್ತಾ ಎಂದರೆ, ಗೊತ್ತು.

25. ಪ್ರತಿವಾದಿಗಳ ತಂದೆ ಹೆಸರು ರಾಮೇಗೌಡ ಎಂದರೆ, ಲಕ್ಷ್ಮಣೇಗೌಡರ ತಂದೆ ಹೆಸರು ಕೆಂದೇಗೌಡ, ರಾಮಕೃಷ್ಣಗೌಡರ ಹಾಗೂ ಜಯರಾಮೇಗೌಡರ ತಂದೆ ರಾಮೇಗೌಡ. ರಾಮೇಗೌಡರಿಗೆ 3 ಜನ ಹೆಣ್ಣು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ.

26. ರಾಮೇಗೌಡ ಮತ್ತು ಲಕ್ಕೇಗೌಡರ ಮಕ್ಕಳು ಅವರ ಕುಟುಂಬದ ಆಸ್ತಿಗಳನ್ನು ಹಂಚಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

27. ಸ.ನಂ.63 ರಲ್ಲಿ ಎಷ್ಟು ಪೋಡುಗಳು ಇವೆ ಎಂದರೆ, ನನಗೆ ಗೊತ್ತಿಲ್ಲ. ಸರ್ವೇ ಮಾಡಿದ ನಂತರ ಸ.ನಂ.63/1 ರಲ್ಲಿ 2 ಎಕರೆ 37 ಗುಂಟೆ ಎಂದು ನಿಗದಿಯಾಗಿದೆ ಎಂದರೆ ಸರಿ.

28. ರಾಮೇಗೌಡ ಮತ್ತು ಲಕ್ಕೇಗೌಡರ ಕುಟುಂಬದವರು ಹಂಚಿಕೊಂಡು ಪ್ರತಿಯೊಬ್ಬರಿಗೆ 18 ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ.

29. ದಾವಾ ಸ್ವತ್ತಿನ ಋಣಭಾರ ಪತ್ರ ಹಾಜರುಪಡಿಸಿದ್ದೀರಾ ಎಂದರೆ, ಕೊಟ್ಟಿದ್ದೇನೆ.

30. ದಾವಾ ಜಮೀನು ಮೊದಲಿಗೆ ಕಾಳೆಗೌಡರಿಗೆ ಸೇರಿದ್ದು ಎಂದರೆ ಸರಿಯಲ್ಲ.

31. ಕಾಳೇಗೌಡರು ದಿಃ 21.11.1944 ರಂದು ರಾಮೇಗೌಡರಿಗೆ ಕ್ರಯಕ್ಕೆ ಕೊಟ್ಟರು ಎಂದರೆ ಸರಿಯಲ್ಲ. ಅಲ್ಲಿಂದ ಇಲ್ಲಿಯವರೆಗೆ ರಾಮೇಗೌಡರ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿಯಲ್ಲ.

32. ರಾಮೇಗೌಡರು ಲಕ್ಷ್ಮಣೇಗೌಡರಿಗೆ ಚಿಕ್ಕಪ್ಪ ಆಗಬೇಕು ಎಂದರೆ ಸರಿ.

33. ಪಕ್ಕಾಪೋಡಿ ಆದ ನಂತರ ಸ.ನಂ.63/1 ಹಾಗೂ 62 ರಲ್ಲಿ 1 ಎಕರೆ ಸೇರಿ 3 ಎಕರೆ ಈಗಲೂ ಪ್ರತಿವಾದಿಗಳ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ.

34. ನೀವು ಕೆ.ಆರ್ ನಗರದಲ್ಲಿ ಇರುವುದರಿಂದ ನೀವು ಯಾವತ್ತೂ ದಾವಾ ಸ್ವತ್ತಿನ ಬಳಿ ಬಂದಿಲ್ಲ ಎಂದರೆ ಸರಿಯಲ್ಲ.

35. ನಿಮ್ಮ ತಂದೆ ಉದ್ದೇಶಪೂರ್ವಕವಾಗಿ 2023 ರಲ್ಲಿ ವಿಭಾಗ ಪತ್ರ ಸೃಷ್ಠಿ ಮಾಡಿದ್ದಾರೆ ಎಂದರೆ ಸರಿಯಲ್ಲ.

36. ಜವರೇಗೌಡರ ಪತ್ನಿ ವಿನೋದಾ ರವರು ನನಗೆ ಗೊತ್ತಿಲ್ಲ. ವಿನೋದಾರವರಿಗೆ ಸಹ ಹಿಸ್ಸೇ ಕೊಡಬೇಕಾಗುತ್ತದೆ ಎಂದು ಅವರನ್ನು ಹೊರತುಪಡಿಸಿ ವಿಭಾಗ ಪತ್ರ ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.

37. ನಿಮ್ಮ ಕುಟುಂಬದ ಎಲ್ಲಾ ಆಸ್ತಿಗಳು ಸೇರಿ ನೀವು, ನಿಮ್ಮ ತಂದೆ ಹಾಗೂ ಸಹೋದರರು ಒಂದೇ ಪತ್ರದಲ್ಲಿ ಹಿಸ್ಸೇ ಮಾಡಿಕೊಳ್ಳಲು ತೊಂದರೆ ಇತ್ತಾ ಎಂದರೆ ಅವರು ಮಾಡಿಕೊಂಡಾಗ ನನಗೆ ಆರೋಗ್ಯ ಸರಿ ಇರಲಿಲ್ಲ, ಆ ನಂತರ ನನಗೆ ಬರೆದುಕೊಟ್ಟಿದ್ದಾರೆ. ಸದರಿ ವಿಚಾರವನ್ನು ನಿಮ್ಮ ವಕೀಲರಿಗೆ ಹೇಳಿದ್ದೀರಾ ಎಂದರೆ, ಇಲ್ಲ. ಬರೆಸಲು ತೊಂದರೆ ಇತ್ತಾ ಎಂದರೆ, ನಾವು ಆ ರೀತಿ ಹೇಳಿಲ್ಲ.

38. ರಾಮೇಗೌಡರ ಬಳಿ ಕ್ರಯದ ಮೂಲಕ ಬಂದಿದೆ ಎಂದರೆ ಸರಿಯಲ್ಲ.

39. ಸತ್ಯಾಂಶ ಹೊರಬರುತ್ತದೆ ಎಂದು ನೀವು ಒಂದು ವರ್ಷದ ಪಹಣಿ ಮಾತ್ರ ನೀಡಿದ್ದೀರಾ ಎಂದರೆ, ನನ್ನ ಹೆಸರಿಗೆ ಇರುವುದನ್ನು ಕೊಟ್ಟಿದ್ದೇನೆ.

40. ನಿಪಿ-1 ಸೃಷ್ಠಿ ಮಾಡಿರುವ ಹಾಗೂ ತಿದ್ದಿರುವ ದಾಖಲೆ ಎಂದರೆ ಸರಿಯಲ್ಲ.

41. ವಿ. ಅಪ್ಪಾಜಿಗೌಡರಿಗೆ ಪ್ರತ್ಯೇಕವಾದ ಜಮೀನು ಇದೆ ಎಂದರೆ ಅವರ ಹೆಸರಿನಲ್ಲಿ ಇದೆ.

42. ಕುಂಡಪ್ಪನ ಅಪ್ಪಾಜಿ ನಿಮ್ಮ ತಾತ ಅಲ್ಲ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

43. ಸುಳ್ಳು ವಂಶವೃಕ್ಷ ನೀಡಿ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

44. ನೀವು, ನಿಮ್ಮ ತಂದೆ ಹಾಗೂ ಸಹೋದಾರರು ರೆವಿನ್ಯೂ ಅಧಿಕಾರಿಗಳೊಂದಿಗೆ ಷರೀಕ್ ಆಗಿ ಪಹಣಿ ಬರೆಸಿದ್ದೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ